ಕ್ರ ಸಂ.	ರಕ್ಷಣೆಗೊಳಪಟ್ಟ ವ್ಯಕ್ತಿಯ ಹೆಸರು	ಅಂಗರಕ್ಷಕರ ಮಾಸಿಕ ವೇತನ	ಭತ್ಯೆ
12	ಶ್ರೀ ಪದ್ಮಪ್ರಸಾದ್ ಹೆಗ್ಡೆ, ನ್ಯಾಯವಾದಿ, ಮಂಗಳೂರು	10,413/–	605/–
13	ಶ್ರೀ ಲ್ಯಾನ್ಸಿ ಮಸ್ಕರೇನಸ್, ಲ್ಯಾನ್ಸಿ ಕನ್ಸ್ಟ್ರಕ್ಷನ್ಸ್	9855/– ಪಾವತಿ ಆಧಾರದ ಮೇರೆಗೆ	650/–
14	ಶ್ರೀ ವಿವೇಕ್ ರಾಜ್, ಉದ್ಯಮಿ, ಮಂಗಳೂರು	9855/– ಪಾವತಿ ಆಧಾರದ ಮೇರೆಗೆ	–
15	ಶ್ರೀ ಪ್ರಭಾಕರ್ ಪೂಂಜಾ, ಉದ್ಯಮಿ, ಮಂಗಳೂರು	10,855/– 9,855/– ಪಾವತಿ ಆಧಾರದ ಮೇರೆಗೆ	600/– 600/–

ಪ್ರಯಾಣ ಭತ್ಯೆಯು ಆಯಾ ತಿಂಗಳಲ್ಲಿ ಕೇಂದ್ರಸ್ಥಾನ ಬಿಟ್ಟು ತೆರಳಿದ ಸಮಯ ಮಾಡಿದ ಪ್ರಯಾಣಕ್ಕೆ ಅನುಗುಣವಾಗಿ ನೀಡಲಾಗುತ್ತದೆ.

ಪಡಿತರ ಚೀಟಿ ಹಾಗೂ ಅನಿಲ ಸಂಪರ್ಕಕ್ಕೆ ಆಗುತ್ತಿರುವ ತೊಂದರೆ

181 (616) ಶ್ರೀ ಖಾದರ್ ಯು.ಟಿ. (ಮಂಗಳೂರು): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಪಡೆಯಲು ಹಾಗೂ ಅನಿಲ ಸಂಪರ್ಕವನ್ನು ಪಡೆಯಲು ಜನತೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇವುಗಳನ್ನು ತ್ವರಿತವಾಗಿ ಪಡೆಯುವಂತೆ ಸರ್ಕಾರ ಸಾರ್ವಜನಿಕರಿಗೆ ಯಾವ ರೀತಿ ಸಹಾಯ ಮಾಡುತ್ತಿದೆ; (ವಿವರ ನೀಡುವುದು)

ಕು॥ ಶೋಭಾ ಕರಂದ್ಲಾಜೆ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ಬಂದಿದೆ.

ಆ) ಪ್ರಸ್ತುತ ಅನರ್ಹ ಪಡಿತರ ಚೀಟಿಗಳನ್ನು ಮತ್ತು ರಿಯಾಯ್ತಿ ದರದ ಅನಿಲ ಸಂಪರ್ಕಗಳನ್ನು ಗುರುತಿಸಲು ಪ್ರಕ್ರಿಯೆ ಜಾರಿಯಲ್ಲಿ ಇರುತ್ತದೆ. ಆ ರೀತಿ

ಅನರ್ಹ ಪ್ರಕರಣಗಳನ್ನು ಕಂಡು ಹಿಡಿಯುವುದರಿಂದ ಅರ್ಹರಿಗೆ ಪಡಿತರ ಚೀಟಿ ಮತ್ತು ಅನಿಲ ಸಂಪರ್ಕ ನೀಡಲು ಸಹಾಯವಾಗುತ್ತದೆ.

ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮ

182 (617) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸರ್ಕಾರ ಈ ಸಾಲಿನಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ;

ಆ) ಇದಕ್ಕಾಗಿ ಕೇಂದ್ರ ಸರ್ಕಾರ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಹಾಗೂ ರಾಜ್ಯ ಸರ್ಕಾರ ಎಷ್ಟು ಹಣ ಕಾಯ್ದಿರಿಸಿದೆ; (ವಿವರ ನೀಡುವುದು)

ಇ) ಹೆಚ್1 ಎನ್1 ರೋಗಗಳ ಪ್ರಕರಣ ಯಾವ ಭಾಗಗಳಲ್ಲಿ ಕಾಣಿಸಿಕೊಂಡಿದೆ; (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯಾದ್ಯಂತ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಎನ್.ಆರ್.ಹೆಚ್.ಎಂ. ಅಡಿಯಲ್ಲಿ ರೋಗವಾಹಕ ರೋಗಗಳ ನಿಯಂತ್ರಣಕ್ಕಾಗಿ ಒಟ್ಟು ರೂ. 374.21 ಲಕ್ಷಗಳ ಅನುದಾನವನ್ನು ಒದಗಿಸಿರುತ್ತದೆ.

ರಾಜ್ಯ ಸರ್ಕಾರವು ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ 2010–11ನೇ ಸಾಲಿನಲ್ಲಿ ಔಷಧಿ ಮತ್ತು ರಸಾಯನಗಳು, ಸಾಮಾಗ್ರಿ ಸರಬರಾಜು, ಹಾಗೂ ವೇತನ ಮತ್ತು ಭತ್ಯೆಗಳು ಇತ್ಯಾದಿ ವೆಚ್ಚಗಳಿಗಾಗಿ ವಿವಿಧ ಆಯವ್ಯಯಗಳ ಅಡಿಯಲ್ಲಿ ಒದಗಿಸಿರುವ ಅನುದಾನದ ವಿವರ ಕೆಳಕಂಡಂತಿದೆ:

1. ಲೆಕ್ಕ ಶೀರ್ಷಿಕೆ: 2010–06–101–1–06 (ಯೋಜನೇತರ–ರಾಜ್ಯ ವಲಯ) – ₹ 288.06 ಲಕ್ಷಗಳು ಮತ್ತು (ಯೋಜನೆ ಅಡಿಯಲ್ಲಿ ₹ 4.00 ಲಕ್ಷಗಳು)
2. ಲೆಕ್ಕ ಶೀರ್ಷಿಕೆ: 2210–06–101–1–02 (ಯೋಜನೇತರ–ರಾಜ್ಯ ವಲಯ) – ₹ 676.00 ಲಕ್ಷಗಳು.